
# ಸ್ವಾಮಿ ವಿವೇಕಾನಂದರ ದೃಷ್ಟಿಯಲ್ಲಿ "ಆಮೂಲಾಗ್ರ ಸುಧಾರಣೆ"

ಎಚ್.ಎನ್. ಸೋಮಸುಂದರಂ




**ಈ** ಜಗತ್ತಿನಲ್ಲಿ ಪ್ರತಿ ಜೀವಿಯೂ ಸುಖಪ್ರಾಪ್ತಿಗಾಗಿ, ದುಃಖನಿವೃತ್ತಿಗಾಗಿ ಹಂಬಲಿಸುತ್ತಿದೆ. ಪ್ರಾಣಿಗಳಲ್ಲಿ ಇದರ ಪರಿಣಾಮವು ಪ್ರಕೃತಿಯ ನಿಯಮಾನುಸಾರ ತಾನೇ ತಾನಾಗಿ ನಡೆದು ಹೋಗುತ್ತದೆ. ಮಾನವನಲ್ಲಿಯಾದರೋ ಆಲೋಚನಾ ಸಾಮರ್ಥ್ಯವಿದ್ದು ಅವನ ಸಮಾಜವು ಭಿನ್ನವಾಗಿದೆ. ಈ ಸಮಾಜದ ಉದ್ದೇಶವೂ ಮಾನವನಿಗೆ ದುಃಖನಾಶ ಮತ್ತು ಸುಖಶಾಂತಿ ನೆಮ್ಮದಿಗಳನ್ನು ಹೊಂದಲು ನೆರವು ನೀಡುವುದೇ ಆಗಿದೆ. ಆದರೆ ಪ್ರಾಣಿಗಳ ಸಮುದಾಯಗಳಲ್ಲಿ "ಬಲಿಷ್ಠನಿಗೇ ಹಕ್ಕು" ಎಂಬ ಕಾಡಿನ ನಿಯಮವೇ ನಡೆಯುತ್ತದೆ. ಮಾನವ ಸಮುದಾಯಗಳಲ್ಲಿಯೂ ಇದೇ ಸಾಕಷ್ಟು ನಡೆಯುತ್ತಿದ್ದರೂ ಪ್ರಕೃತಿಗಿಂತ ಮೇಲ್ಪಟ್ಟ ಸಂಸ್ಕೃತಿ ಎಂಬುವುದೊಂದು ಇರುವುದರಿಂದ ಎಚ್ಚೆತ್ತ ಸಮಾಜದ ರೂಪುರೇಷೆಗಳು, ನೀತಿ ನಿಯಮಾವಳಿಗಳು ಮಾನವೀಯತೆಯ ದೃಷ್ಟಿಕೋನದಿಂದ ನಿರ್ಧಾರವಾಗುತ್ತವೆ. ಹಾಗೆಯೇ ಆಗಬೇಕು. ಇದು ನಿಜವಾದ ಮಾನವ ಸಮಾಜದ ಸ್ವರೂಪ.

**ಸಮಾಜದ ಓರೆಕೋರೆಗಳಿಗೆ ಕಾರಣ**

ಮಾನವನಿಗೆ ಸಂಸ್ಕೃತಿ ಎಂಬ ವರವಿರುವಂತೆ ವಿಕೃತಿ ಎಂಬ ಶಾಪವೂ ಇದೆ. ಪ್ರಾಣಿಗಳಲ್ಲಿ ಪ್ರಕೃತಿಯೊಂದೇ ಕೆಲಸ ಮಾಡುವಂತೆ ಕಾಣುತ್ತದೆ. ಒಂದು ಹುಲಿ ತನ್ನ ಆಹಾರಕ್ಕಾಗಿ ಒಂದು ಜಿಂಕೆಯನ್ನೋ, ಇನ್ನಾವುದೇ ಪ್ರಾಣಿಯನ್ನೋ ಕೊಂದು ತಿಂದ ನಂತರ ಮತ್ತೆ ಹಸಿವಾಗುವವರೆಗೆ ಬೇರೆ ಪ್ರಾಣಿಗಳನ್ನು ಕೊಲ್ಲಲು ಅರಸುತ್ತಾ ಹೋಗುವುದಿಲ್ಲ. ಆದರೆ ಮಾನವನೋ! ಎಷ್ಟೇ ಸಂಗ್ರಹಿಸಿದರೂ ಇನ್ನೂ ಬೇಕೆನ್ನುತ್ತಾನೆ. ಜಾತಕದ ಕಥೆಯ ಬೇಡನೂ, ಅರೇಬಿಯನ್ ನೈಟ್ಸ್ ಕಥೆಯ ಸಿಂದಬಾದ್‌ನನ್ನು ಕೊಂಡುಕೊಂಡ ಯಜಮಾನನೂ, ಆನೆಯ ದಂತಕ್ಕಾಗಿ ಆನೆಯನ್ನೇ ಕೊಲ್ಲುತ್ತಾರೆ. ಹೀಗೆ ಇದು ಇಂದು ವಿಶ್ವಾದ್ಯಂತ ನಡೆಯುತ್ತಿರುವುದೇ! ಇದೇ ವಿಕೃತಿ. "ಪ್ರಕೃತಿಯು ಮನುಷ್ಯನಿಗೆ ಅಗತ್ಯವಾಗಿ ಬೇಕಾದ ಆವಶ್ಯಕತೆಗಳನ್ನು ಪೂರೈಸಲು ಸಾಕಷ್ಟು ಸಂಪನ್ಮೂಲ ಹೊಂದಿದ್ದಾಳೆ; ದುರಾಸೆಗಲ್ಲ" ಎಂಬ ಗಾಂಧೀಜಿಯವರ ಮಾತನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

**ವಿಕೃತಿಯ ಕುರೂಪಗಳು**

ದುರಾಸೆಯೊಂದೇ ಈ ವಿಕೃತಿಯ ಕುರೂಪವಲ್ಲ. ಅನೇಕ ಮೂಢ ನಂಬಿಕೆಗಳು, ದುರಾಚಾರಗಳು, ಕ್ರೌರ್ಯ ಶೋಷಣೆಗಳು ಮುಂತಾದವು ಒಳನುಸುಳಿ ಸಮಾಜವನ್ನು ಕಾಡುತ್ತವೆ. ಇನ್ನು ಕೆಲವು ಯಾವುದೋ ಸಮಯದಲ್ಲಿ ಸಂದರ್ಭೋಚಿತವಾಗಿದ್ದು ನಂತರ ಅಪ್ರಸ್ತುತವಾದರೂ ಉಳಿದು ನೇತಾಡಿಕೊಂಡಿರುವುವು. ಉದಾಹರಣೆಗೆ ಒಂದು ಪುರಾತನ ಪದ್ಧತಿಯನ್ನು ಸ್ಮರಿಸುವುದಾದರೆ, ಶತ್ರುಗಳ ಕೈಗೆ ಸಿಕ್ಕಿಬೀಳುವ ಸಂದರ್ಭದಲ್ಲಿಯೋ, ಗಂಡನ ಮೇಲಿನ ಅತಿ ಪ್ರೀತಿಯಿಂದಲೋ ಯಾರೋ ಕೆಲವರು ಚಿತೆಗೆ ಹಾರಿ ಸಜೀವ ದಹನವಾಗಿದ್ದರೆ, ಅದನ್ನೇ ವೈಭವೀಕರಿಸಿ 'ಸತೀ' ಪದ್ಧತಿಯಾಗಿ ರೂಪುಗೊಳಿಸಿದುದು; ಇನ್ನೂ ಕೆಲವು ದೇಶಗಳಲ್ಲಿ 'ಮಾಟಗಾತಿ'ಯರೆಂದು ಹಣೆಪಟ್ಟಿ ಹಚ್ಚಿ ಮಹಿಳೆಯರನ್ನು ಜೀವಂತ ಸುಟ್ಟದ್ದು ಮುಂತಾದ ವಿಚಾರಗಳನ್ನು ನೆನಪು ಮಾಡಿಕೊಳ್ಳಬಹುದು.

ಹೆಚ್ಚಿನ ಕ್ರೌರ್ಯವು ಧರ್ಮದ, ದೇವರ ಹೆಸರಿನಲ್ಲಿ ನಡೆದಿರುವುದು ವಿಶ್ವದ ಅತಿ ದೊಡ್ಡ ದುರಂತ. ವೈಜ್ಞಾನಿಕ ಮನೋಭಾವನೆಗಾಗಿ ಕೆಲವರು ಚಿತ್ರಹಿಂಸೆ, ಸೆರೆವಾಸ, ಮರಣದಂಡನೆಗೆ ಒಳಗಾಗಿದ್ದರೆ, ತಮ್ಮ ವಿಚಾರವಾದ, ವಿವೇಕ, ಒಳ್ಳೆಯ ಮಾತುಗಳಿಂದಾಗಿಯೇ ಇನ್ನೂ ಅನೇಕರು ಸಾವಿಗೆ ಗುರಿಯಾದರು. ಹೊಸ ಸಹಸ್ರಮಾನಕ್ಕೆ ಕಾಲಿಟ್ಟರೂ ಸಹ



ಸ್ವಾಮಿ ವಿವೇಕಾನಂದರ ನುಡಿಗಳಿಂದ ಪ್ರೇರಿತರಾಗಿ ಸಮಾಜಸೇವೆಯಲ್ಲೇ ತೊಡಗಿದ್ದು, ಸ್ವಂತ ಅನುಭವದಿಂದ ಸಮಾಜದಲ್ಲಿ ಆಗಬೇಕಾಗಿರುವ ನಿಜವಾದ ಸುಧಾರಣೆಯ ಬಗ್ಗೆ ಬರೆದಿರುವ ಲೇಖಕರು ಬೆಂಗಳೂರಿನ ನಿವಾಸಿಗಳು.

ಇಂದು ವಿಶ್ವದೆಲ್ಲೆಡೆ ಹಿಂಸಾಚಾರ ತಾಂಡವವಾಡುತ್ತಿದೆ. ನಮ್ಮ ದೇಶದಲ್ಲಿ ಮತೀಯ ಗಲಭೆಗಳು, ಜಾತಿ ವೈಷಮ್ಯಗಳು, ಮುಂದುವರಿಯುತ್ತಿದ್ದರೆ ಇನ್ನೂ ಅನೇಕ ರಾಷ್ಟ್ರಗಳಲ್ಲಿ ಜನಾಂಗೀಯ ಕಲಹ, ಮಾನವ ಹಕ್ಕುಗಳ ದಮನ ಸಂಭವಿಸುತ್ತಿವೆ. ಭಯೋತ್ಪಾದನೆಯಂತೂ ವಿಶ್ವದೆಲ್ಲೆಡೆ ಹೆಡೆಯೆತ್ತಿ ನಿಂತಿದೆ.

**ನಕ್ಷತ್ರಗಳಂತೆ ಮೂಡಿದ ಸುಧಾರಕರು**

ಹೀಗೆ ಹಿಂದೆ, ಇಂದು, ಮುಂದೂ ಸಹ ರಕ್ಷಣೆ, ನೆಮ್ಮದಿ ಕೊಡಬೇಕಾದ, ದಾರಿದೀಪವಾಗಿರಬೇಕಾದ ಸಮಾಜವು ಭಕ್ಷಣೆಯ ಸಮಾಜವಾಗಿದೆ. ಆದರೂ ಇದರಿಂದ ಧೃತಿಗೆಡದೆ, ಹಿಂದಿನ, ಇಂದಿನ ಅನೇಕರು ಸಮಾಜವನ್ನು ಆಗಾಗ ತೊಳೆದು ಸುಧಾರಣೆ ಮಾಡುತ್ತಲೇ ಬಂದಿದ್ದಾರೆ. ಸಮಾಜವು ಜನರಿಗೆ ಕೇವಲ ಸಾಮಾಜಿಕ ಪಾಠ ಹೇಳಿಕೊಟ್ಟರೆ ಸಾಲದು. ಜನರ ಜೀವನವು ಭದ್ರ ಆಧ್ಯಾತ್ಮಿಕ ನೆಲೆಯಲ್ಲಿ ಊರಿ ಅವರು ಸತ್ಪ್ರಜೆಗಳಾಗುವಂತಹ ಹಿನ್ನೆಲೆಯನ್ನು ಒದಗಿಸಬೇಕು. ಇಂತಹ ಬೆಳಕಿನಲ್ಲಿ ಈ ಸಮಾಜ ಸುಧಾರಕರು ಕೆಲಸ ಮಾಡಿದ್ದಾರೆ. ಇವರ ಚೇತನ ಅದಮ್ಯ, ಸಹನೆ ಅಪೂರ್ವ, ಪ್ರೇಮ ಅಪಾರ. ಎಲೆ ಮರೆಯ ಕಾಯಿಯಂತೆ, ಮುಂಜಾನೆಯ ಮಂಜು ಸದ್ದಿಲ್ಲದೆ ಅತ್ಯಂತ ಸುಂದರ ಹೂವನ್ನು ಅರಳಿಸುವಂತೆ ಈ ಸುಧಾರಕರು ತಮ್ಮ ಜೀವವನ್ನೇ ಜನರಿಗಾಗಿ ತೇಯ್ದಿದ್ದಾರೆ. ಸ್ವಾಮಿ ವಿವೇಕಾನಂದರು ಇದೇ ಪ್ರಶ್ನೆಯನ್ನು ಕೈಗೆತ್ತಿಕೊಳ್ಳುತ್ತಾರೆ. ಭರತಖಂಡದಲ್ಲಿ ಎಂದಾದರೂ ಸುಧಾರಕರ ಕೊರತೆಯಿತ್ತೇ ಎಂದು ಚರ್ಚಿಸುತ್ತಾ ಹೀಗೆ ಹೇಳುತ್ತಾರೆ: "ಶಂಕರ ಯಾರು? ರಾಮಾನುಜ ಯಾರು? ನಾನಕ್ ಯಾರು? ಕಬೀರ್ ಯಾರು? ಒಂದೊಂದು ಸಮಸ್ಯೆ ಉದ್ಭವವಾದಾಗಲೂ ನಕ್ಷತ್ರಗಳಂತೆ ವ್ಯಕ್ತಿಗಳು ಉದಿಸಿ ಸುಧಾರಣೆಯನ್ನು ಮಾಡಿಯೇ ಇದ್ದಾರೆ." ಹಾಗೆ ನೋಡಿದರೆ ಶ್ರೀರಾಮ ಕೃಷ್ಣ, ವಿವೇಕಾನಂದರೇ ಒಂದು ಪರ್ವಕಾಲದಲ್ಲಿ ಯುಗ್ಮತಾರೆಗಳಂತೆ ಉದಿಸಿ ವಿಶ್ವಕ್ಕೆ ಅಮೂಲ್ಯ ಕೊಡುಗೆಯನ್ನು ಕೊಟ್ಟು ವಿಶ್ವಧರ್ಮ ಸಮನ್ವಯ ಶಾಂತಿ ಸಂದೇಶವನ್ನು ನೀಡಿದ್ದಾರೆ.

ಸ್ವಾಮಿ ವಿವೇಕಾನಂದರು ಆಮೂಲಾಗ್ರ ಸುಧಾರಣೆ ಬಗ್ಗೆ ಅಂದು ಚಿಂತಿಸಿದುದು ಭಾರತದ ಪುನರುಜ್ಜೀವನಕ್ಕಾಗಿ. ಅವರು ಕೊಡಬೇಕಾಗಿದ್ದ ಸಂದೇಶವು ಮಾನವನ ಸುಪ್ತ ದೈವತ್ವದ ಸಂದೇಶವೇ! ಇದು ಕೇವಲ ಭಾರತಕ್ಕಾಗಿ ಅಲ್ಲ; ಇಡೀ ವಿಶ್ವಕ್ಕಾಗಿ. ಆದರೆ ಭಾರತವು ಈ ಜ್ಞಾನದ ಮೂಲವಾಗಿದ್ದರೂ, ನಮ್ಮ ಅಂತಃಶಕ್ತಿಯನ್ನೇ ನಾವು ಹಾಳುಗೆಡವಿಕೊಂಡೆವು! ಜೀವಜಲವನ್ನು ಕಡೆಗಣಿಸಿದೆವು! ಆಮೂಲಾಗ್ರ ಸುಧಾರಣೆಯಿಂದ ಭಾರತ ಎಚ್ಚೆತ್ತು ತನ್ನಲ್ಲಿರುವ ಅಧ್ಯಾತ್ಮ ಭಂಡಾರವನ್ನು ತಾನೂ ಗುರುತಿಸಿ, ಧನ್ಯವಾಗಿ, ಗಂಟಲೊಣಗಿ ಕಾಯುತ್ತಿರುವ ಜಗತ್ತಿಗೆ ಅದನ್ನು ಬೋಧಿಸಿ, ತನ್ನ ಕಾಣಿಕೆ ನೀಡಲೆಂದು ಅವರು ಒಬ್ಬ ದ್ರಷ್ಟಾರರಾಗಿ ಕಂಡರು. ಬೇರೆ ದೇಶಗಳಿಗೆ ಕೈಒಡ್ಡುವ ಪರಿಸ್ಥಿತಿಯಾಗದೆ, ಭಾರತವು ಕೊಟ್ಟು ತೆಗೆದುಕೊಳ್ಳುವ ಘನತೆಯನ್ನು ಪಡೆಯಲೆಂದು ಆಶಿಸಿದರು. ಬಿಲದಲ್ಲಿ ಸೇರಿಕೊಳ್ಳಲು ಹವಣಿಸುತ್ತಿದ್ದ ಭಾರತದ ಜನತೆಗೆ ಹೊಸ ದಿಕ್ಕನ್ನು ತೋರಿಸಿಕೊಟ್ಟರು. ಈ ಕಾರ್ಯಸಾಧನೆಗೆ ಅವರು ಕಂಡದ್ದು ಆಯ್ದ, ಸಮರ್ಪಣಾ ಮನೋಭಾವ ಹೊಂದಿರುವ ಯುವಜನತೆಯನ್ನು.

**"ಬೇಕು ಇಂದು ಬುದ್ಧಸಮರು, ಒಬ್ಬರಲ್ಲ ನೂರು ಜನರು**
**ಇಂಥ ಜನಕೆ ಕಾದು ಬುವಿಯು ಹಾತೊರೆದು**
**ಮೊರೆಯುತಿಹುದು"**

(*'ಕೂಗಿ ಕರೆಯುವಾ,' ಸ್ವಾಮಿ ಶಾಸ್ತ್ರಾನಂದ*)

"ಹೊಡೆದರೆ ಆನೆಯನ್ನು ಹೊಡಿ, ದೋಚಿದರೆ ಭಂಡಾರವನ್ನೇ ದೋಚು" ಎಂದು ಹೇಳುತ್ತಿದ್ದ ಸ್ವಾಮಿ ವಿವೇಕಾನಂದರು ಮಾನವಕುಲವನ್ನೇ ಸುಧಾರಣೆ ಮಾಡಲು ಕಾರ್ಯ ಪ್ರಣಾಳಿಯನ್ನು ತಮ್ಮ ೩೯ ವರ್ಷಗಳ ಜೀವಿತದಲ್ಲಿಯೇ ರೂಪಿಸಿ, ಅದನ್ನು ಗಮನಾರ್ಹವಾಗಿ ಸಾಧಿಸಿದರು. ವಿಶ್ವದ ಒಳಿತನ್ನು, ಭಾರತದ ಅಭ್ಯುದಯವನ್ನು ಇದರಲ್ಲಿ ಏಕಕಾಲದಲ್ಲಿ ಸಮನ್ವಯಿಸಿದರು. ಸರ್ವಧರ್ಮ ಸಮಾನತೆಯನ್ನು, ವಿಶ್ವಶಾಂತಿಯನ್ನು ಸಾರಿದರು.

**ಸ್ವಾಮಿ ವಿವೇಕಾನಂದರ ದೃಷ್ಟಿಯಲ್ಲಿ ಸಮಾಜ ಸುಧಾರಣೆ**

ಭಾರತೀಯ ಸಮಾಜ ಆಧುನಿಕ ಆವಶ್ಯಕತೆಗಳಿಗೆ ತಕ್ಕಂತೆ ಸ್ಪಂದಿಸಬೇಕು ಎಂಬುದನ್ನು ಸ್ವಾಮಿ ವಿವೇಕಾನಂದರು ಮನಗಂಡರು. ಆದರೆ ತಾವು ಸುಧಾರಕರೆಂಬ ಭ್ರಮೆಯಲ್ಲಿ ಕೆಲವರು ಮಾಡುತ್ತಿದ್ದ ತೋರಿಕೆಯ ಸುಧಾರಣೆ ಪ್ರಯತ್ನಗಳನ್ನು ಸ್ವಾಮೀಜಿಯವರು ಒಪ್ಪುವುದಿಲ್ಲ. ಬಹುಶಃ ಅದರಿಂದ ಸಮಸ್ಯೆಗಳು ಇನ್ನೂ ಉಲ್ಬಣಿಸಬಹುದೇನೋ! ಈ ವಿಚಾರದಲ್ಲಿ ಅವರು ಈ ರೀತಿ ನುಡಿದರು:

"ನಮ್ಮ ಸುಧಾರಕರು ಅತ್ಯಂತ ದಲಿತನಿಗೂ ಕೂಡ ಸೇವೆಯನ್ನು ಸಲ್ಲಿಸುವಂತಹ ಬದುಕನ್ನು ಬಾಳಲಿ, ಆಗ ನಾನು ಅವರ ಪದತಲದಲ್ಲಿ ಕುಳಿತು ಕಲಿತುಕೊಳ್ಳುತ್ತೇನೆ. ಅದಕ್ಕೆ ಮುಂಚೆ ಅಲ್ಲ. ಎಳ್ಳಿನಷ್ಟು ಅನುಷ್ಠಾನ ರಾಶಿರಾಶಿ ಮಾತಿಗಿಂತ ಮೇಲು....

"ಸುಧಾರಕರಿಗೆ, ನಾನು ಅವರಿಗಿಂತ ಮಿಗಿಲಾದ ಸುಧಾರಕ ಎಂದು ಹೇಳುತ್ತೇನೆ. ಅವರು ಚೂರುಪಾರುಗಳನ್ನು ಸುಧಾರಿಸಲು ಯತ್ನಿಸುವರು. ನನಗೆ ಆಮೂಲಾಗ್ರ ಸುಧಾರಣೆ ಬೇಕು. ಮಾರ್ಗವನ್ನು ಕುರಿತು ಮಾತ್ರ ನಮ್ಮಲ್ಲಿ ವ್ಯತ್ಯಾಸ. ಅವರದು ಧ್ವಂಸಮಾರ್ಗ. ನನ್ನದು ನಿರ್ಮಾಣ ಮಾರ್ಗ.

ನನಗೆ ಸುಧಾರಣೆಯಲ್ಲಿ ನಂಬಿಕೆಯಿಲ್ಲ. ನನಗೆ ಬೆಳವಣಿಗೆಯಲ್ಲಿ ನಂಬಿಕೆಯುಂಟು. ನಾನು ದೇವರ ಸ್ಥಾನದಲ್ಲಿ ನಿಂತು ಸಮಾಜಕ್ಕೆ 'ಹೀಗೆ ಚಲಿಸಬೇಕು' ಎಂದು ಅಪ್ಪಣೆ ಮಾಡಲಾರೆ. ರಾಮನು ಸೇತುವೆಯನ್ನು ಕಟ್ಟುವಾಗ ಇದ್ದ ಅಳಿಲಿನಂತೆ ನಾನು ಇರಬೇಕೆಂದು ಬಯಸುವೆನು. ಅದು ತನ್ನ ಪಾಲಿಗೆ ಬಂದ ಮರಳನ್ನು ಸೇತುವೆಗೆ ಕೊಡಹಿ ಧನ್ಯವಾಗುತ್ತಿತ್ತು. ಇದು ನನ್ನ ಸ್ಥಿತಿ.

"ಎಲ್ಲಿ ಮತಭ್ರಾಂತರಾದ ಸುಧಾರಕರಿದ್ದಾರೋ ಅವರೆಲ್ಲಾ ತಮ್ಮ ಗುರಿಯನ್ನೇ ಕಳೆದುಕೊಂಡರು ಎಂಬುದನ್ನು ಚರಿತ್ರೆಯು ತೋರಿಸಿದೆ.

'ನಮ್ಮಲ್ಲಿ ದೋಷಗಳಿವೆ ಎಂದು ನಾವು ಒಪ್ಪಿಕೊಳ್ಳುತ್ತೇವೆ. ಎಲ್ಲರೂ ದೋಷವನ್ನೇ ತೋರಬಹುದು; ಆದರೆ ಯಾರು ಅದರಿಂದ ಪಾರಾಗಲು ಮಾರ್ಗವನ್ನು ತೋರಬಲ್ಲರೋ ಅವರೇ ಮಾನವ ಬಂಧುಗಳು.

"ಆರೋಗ್ಯಕರವಾದ ಬಲವಾದ ಪ್ರಜಾಭಿಪ್ರಾಯವನ್ನು ಸೃಷ್ಟಿಸುವುದಕ್ಕೆ ಬಹಳ ಕಾಲ ಹಿಡಿಯುವುದು. ಅಲ್ಲಿಯವರೆಗೆ ನಾವು ಕಾಯಬೇಕು. ಸಮಾಜ ಸುಧಾರಣೆ ಸಮಸ್ಯೆಯೆಲ್ಲಾ ಹೀಗೆ ಆಗುವುದು. ಯಾರಿಗೆ ಸುಧಾರಣೆ ಬೇಕಾಗಿದೆಯೋ ಮೊದಲು ಅವರನ್ನು ಅಣಿಮಾಡಿ.

"ನೀವು ಸಮಸ್ಯೆಯ ಮೂಲಕ್ಕೆ ಹೋಗಬೇಕು. ಇದನ್ನೇ ನಾನು ಆಮೂಲಾಗ್ರ ಸುಧಾರಣೆ ಎನ್ನುವುದು.

"ಇತರ ರಾಷ್ಟ್ರಗಳ ಸಾಮಾಜಿಕ ಸಂಸ್ಥೆಗಳನ್ನು ನಾನು ಅಲ್ಲಗಳೆಯುವುದಿಲ್ಲ. ಅವು ಅವರಿಗೆ ಒಳ್ಳೆಯದು, ನಮಗಲ್ಲ. ಅವರ ಅಮೃತ ನಮಗೆ ವಿಷವಾಗಬಹುದು. ನಾವು ಕಲಿಯ ಬೇಕಾದ ಮೊದಲನೆಯ ನೀತಿಯೇ ಇದು. ಅವರ ವೈಜ್ಞಾನಿಕ ಸಮಾಜದ ಸಂಸ್ಕಾರಕ್ಕೆ ತಕ್ಕಂತೆ ಈಗ ಅವರ ಆಚಾರ ವ್ಯವಹಾರಗಳಿವೆ. ಸಹಸ್ರಾರು ವರುಷಗಳ ನಮ್ಮ ಕರ್ಮಕ್ಕೆ ಅನುಗುಣವಾಗಿ ನಾವು ಬೆಳೆಯಬೇಕಾಗಿದೆ." (ನನ್ನ ಸಮರನೀತಿ: ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂ.೩, ಪುಟ.೪೮-೯೮)

**(ಮುಂದುವರೆಯುವುದು)**

## ಕೇಳಿ ತಿಳಿಯಿರಿ

**[ಈ ಬಾರಿ ಸಾಧಕರ ಪ್ರಶ್ನೆಗಳಿಗೆ ಉತ್ತರಗಳನ್ನು ನೀಡಿರುವವರು ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದ ನೂತನ ಅಧ್ಯಕ್ಷರಾಗಿರುವ ಸ್ವಾಮಿ ನಿತ್ಯಸ್ಥಾನಂದಜಿಯವರು. ಓದುಗರು ತಮ್ಮ ಆಧ್ಯಾತ್ಮಿಕ ಜೀವನಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಸ್ಫುಟವಾಗಿ ಕೆಲವೇ ವಾಕ್ಯಗಳಲ್ಲಿ ಬರೆದು ಈ ಪತ್ರಿಕೆಯ ವಿಳಾಸಕ್ಕೆ ಕಳುಹಿಸಬಹುದು.]**

**ಭಕ್ತನಿಗೂ ಸಾಧಕನಿಗೂ ಏನು ವ್ಯತ್ಯಾಸ? ಯಾವ ಮಟ್ಟದಲ್ಲಿ (ಸ್ಥಿತಿಯಲ್ಲಿ) ಭಕ್ತ ಸಾಧಕನೆನಿಸಿಕೊಳ್ಳುತ್ತಾನೆ? ಸಾಧನೆಯ ಅಳತೆಗೋಲು ಯಾವುದು?**

ಸಾಧಾರಣ ಅರ್ಥದಲ್ಲಿ ದೇವರಲ್ಲಿ ಶ್ರದ್ಧೆಯುಳ್ಳವರನ್ನು, ದೇವಾಲಯಗಳಿಗೆ ಹೋಗುವವರನ್ನು ಮತ್ತು ಧಾರ್ಮಿಕ ಆಚರಣೆಗಳಲ್ಲಿ ತೊಡಗಿರುವವರನ್ನು ಭಕ್ತರು ಎಂದು ಕರೆಯಬಹುದು. ಭಕ್ತ ಎಂದರೆ ದೇವರನ್ನು ಭಜಿಸುವವನು ಅಥವಾ ಸ್ಮರಿಸುವವನು ಎಂದು ಅರ್ಥ. ದೇವರ ಮೇಲಿನ ಪ್ರೀತಿಯಿಂದ ದೇವರನ್ನು ಭಜಿಸುವವನು ನಿಜವಾದ ಅರ್ಥದಲ್ಲಿ ಭಕ್ತ ಎನಿಸಿಕೊಳ್ಳುತ್ತಾನೆ. ಇಂತಹ ಭಕ್ತನು ದೇವರನ್ನು ಪಡೆಯಬೇಕು ಎಂಬ ಆದರ್ಶದಿಂದ ದೇವರನ್ನು ಭಜಿಸುತ್ತಾನೆ. ಈ ದೃಷ್ಟಿಯಿಂದ ಅವನು ಸಾಧಕ ಎನಿಸಿಕೊಳ್ಳುತ್ತಾನೆ. ಇವನು ಭಕ್ತಿಮಾರ್ಗವನ್ನು ಅನುಸರಿಸುವ ಸಾಧಕ. ಹಾಗೆಯೆ ಜ್ಞಾನಮಾರ್ಗವನ್ನು ಅನುಸರಿಸುವ ಸಾಧಕರು ಇರುತ್ತಾರೆ. ಜೀವನದಲ್ಲಿ ಏನನ್ನಾದರೂ ಸಾಧಿಸಲು ಪ್ರಯತ್ನಿಸುವವನನ್ನು ಸಾಧಕ ಎಂದು ಕರೆಯಬಹುದು. ವಿಶೇಷ ಅರ್ಥದಲ್ಲಿ ಆಧ್ಯಾತ್ಮಿಕ ಉನ್ನತಿಗಾಗಿ ಸಾಧನೆ ಮಾಡುವವರನ್ನು ಸಾಧಕರು ಎಂದು ಕರೆಯುತ್ತಾರೆ. ಆದ್ದರಿಂದ ಆಧ್ಯಾತ್ಮಿಕ ದೃಷ್ಟಿಯಿಂದ ಭಕ್ತನನ್ನು ಸಾಧಕ ಎಂದೂ ಕರೆಯಬಹುದು.

ಪ್ರಾಪಂಚಿಕ ವಿಷಯಗಳ ಕಡೆ ವೈರಾಗ್ಯ, ಆಂತರಿಕ ತೃಪ್ತಿ ಮತ್ತು ಮನಃಶಾಂತಿ, ನಿಃಸ್ವಾರ್ಥ ಪ್ರೇಮ, ಕಷ್ಟಸುಖಗಳಲ್ಲಿ ವಿಚಲಿತವಾಗದ ಮಾನಸಿಕ ಸ್ಥಿರತೆ – ಇವು ಸಾಧನೆಯ ಅಳತೆಗೋಲುಗಳು.

**ಅನಾಸಕ್ತಿಯಿಂದ ಕರ್ಮ ಮಾಡುವುದು ಹೇಗೆ?**

ನಮ್ಮಲ್ಲಿ ಎರಡು ಆದರ್ಶಗಳು ಇರಬೇಕು – ವೈಯಕ್ತಿಕವಾಗಿ ಆಧ್ಯಾತ್ಮಿಕ ಉನ್ನತಿಯನ್ನು ಸಾಧಿಸುವುದು ಮತ್ತು ಜಗತ್ತಿನ ಅಥವಾ ಸಮಾಜದ ಹಿತಕ್ಕಾಗಿ ದುಡಿಯುವುದು. ನಾವು ಮಾಡುವ ಎಲ್ಲ ಕರ್ಮಗಳು ಮತ್ತು ಸಾಧನೆಗಳು ಈ ಆದರ್ಶಕ್ಕೆ ಪೂರಕವಾಗಿರಬೇಕು. ನಮ್ಮಲ್ಲಿ ಈ ಆದರ್ಶಗಳು ಪ್ರಧಾನವಾಗಿದ್ದರೆ, ಪ್ರಾಪಂಚಿಕ ಆಶೋತ್ತರಗಳು ಇಲ್ಲದಿದ್ದರೆ, ನಾವು ನಿಃಸ್ವಾರ್ಥಿಗಳಾಗಿದ್ದರೆ ಆಗ ನಮ್ಮ ಪಾಲಿಗೆ ಬಂದ ಕರ್ಮಗಳನ್ನು ಅನಾಸಕ್ತಿಯಿಂದ ಮಾಡಲು ಸಾಧ್ಯ.

ಯಾವ ಕರ್ಮವೂ ಸಂಪೂರ್ಣವಾಗಿ ನಮ್ಮದಲ್ಲ. ಪ್ರತಿಯೊಂದು ಕರ್ಮಕ್ಕೂ ಒಂದು ಸಾಮಾಜಿಕ ಆಯಾಮ ಇರುತ್ತದೆ. ನಾವು ಹೇಗೆ ಕೆಲಸ ಮಾಡುತ್ತೇವೆ ಅದಕ್ಕನುಗುಣವಾಗಿ ಆ ಕೆಲಸವು ಸಮಾಜದ ಮೇಲೆ ಒಳ್ಳೆಯ ಅಥವಾ ಕೆಟ್ಟ ಪರಿಣಾಮವನ್ನು ಉಂಟುಮಾಡುತ್ತದೆ. ಆದ್ದರಿಂದ ಸಾಮಾಜಿಕ ಪ್ರಜ್ಞೆಯೊಂದಿಗೆ, ಸಾಮಾಜಿಕ ಹಿತದೃಷ್ಟಿಯಿಂದ, ಸಾಮಾಜಿಕ ಜವಾಬ್ದಾರಿಯಿಂದ ಕರ್ಮವನ್ನು ಮಾಡಬೇಕು. ಕೇವಲ ಹಣ ಗಳಿಸುವುದೇ, ವೈಯಕ್ತಿಕ ಆಸೆಗಳನ್ನು ಪೂರ್ತಿಗೊಳಿಸುವುದೇ ಕರ್ಮದ ಉದ್ದೇಶವಾಗಿರಬಾರದು. ಈ ರೀತಿ ವೈಯಕ್ತಿಕ ಆಸೆಗಳಿಲ್ಲದೆ ನಮ್ಮ ಪಾಲಿಗೆ ಬಂದ ಕರ್ಮಗಳನ್ನು